Vijayvani 06/03/018

■ ಶಿವಾನಂದ ತಗಡೂರು ಬೆಂಗಳೂರು

ಬೇಸಿಗೆ ಆರಂಭದಲ್ಲೇ ರಾಜ್ಯದ ಜನತೆಗೆ ಕರೆಂಟ್ ಶಾಕ್ ತಟ್ಟಿದೆ! ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗಿರುವ ಪರಿಣಾಮ ಪರಿಸ್ಥಿತಿ ನಿಭಾಯಿಸುವುದಕ್ಕಾಗಿ ಮಾರ್ಚ್ ಮೊದಲ ವಾರದಲ್ಲೇ ತಾಂತ್ರಿಕ ಕಾರಣಗಳ ನೆಪವೊಡ್ಡಿ ಅನಧಿಕೃತ ಲೋಡ್‌ಶೆಡ್ಡಿಂಗ್ ಜಾರಿಗೊಳಿಸಲಾಗಿದೆ. ಜಲಾಶಯಗಳಲ್ಲಿ ನೀರಿನ ಕೊರತೆ, ಕಲ್ಲಿದ್ದಲು ಪೂರೈಕೆಯಲ್ಲಿನ ವ್ಯತ್ಯಯ ಇತ್ಯಾದಿ ಕಾರಣಗಳಿಂದಾಗಿ ಏಪ್ರಿಲ್, ಮೇನಲ್ಲೇ ಲೋಡ್ ಶೆಡ್ಡಿಂಗ್ ಅನಿವಾರ್ಯವಾಗುವ ಲಕ್ಷಣ ಗೋಚರಿಸಿದೆ. ಚಳಿಗಾಲದಲ್ಲಿ ಇದ್ದ 7500-8500 ಮೆಗಾವಾಟ್ ವಿದ್ಯುತ್ ಬೇಡಿಕೆ ಫೆಬ್ರವರಿ ಕೊನೆ ವಾರದಲ್ಲಿ 9 ಸಾವಿರ ಮೆವಾ ದಾಟಿತ್ತು. ಮಾರ್ಚ್ ಮೊದಲ ದಿನವೇ ವಿದ್ಯುತ್ ಬೇಡಿಕೆ 9800 ಮೆಗಾವಾಟ್‌ಗೆ ಜಿಗಿದಿರುವುದರಿಂದ ಒಟ್ಟಾರೆ ಬೇಡಿಕೆ ಪರಿಣಾಮ ಮಾಸಾಂತ್ಯಕ್ಕೆ 10,500 ಮೆವಾ ದಾಟಬಹುದೆಂದು ಅಂದಾಜಿಸಲಾಗಿದೆ.




# ಕರೆಂಟ್ ಕಣ್ಣಾಮುಚ್ಚಾಲೆ

**ಸದ್ಯದ ಬೇಡಿಕೆ ಅನ್ವಯ ರಾಜ್ಯಕ್ಕೆ 2 ಸಾವಿರ ಮೆವಾ ವಿದ್ಯುತ್ ಕೊರತೆಯಾಗುತ್ತಿದೆ. ಹೆಚ್ಚುವರಿ ವಿದ್ಯುತ್ ಉತ್ಪಾದನೆ ಮಾಡಲು ಉಷ್ಣ ವಿದ್ಯುತ್ ಸ್ಥಾವರಗಳಿಗೆ ಕಲ್ಲಿದ್ದಲು ಸಮಸ್ಯೆ ಬಾಧಿಸುತ್ತಿದೆ. ಈ ಮೊದಲು 15 ದಿನಗಳಿಗಾಗುವಷ್ಟು ಕಲ್ಲಿದ್ದಲು ದಾಸ್ತಾನು ಇರುತ್ತಿತ್ತು. ಆದರೆ ಈಗ ಸರಬರಾಜು ಸಮಸ್ಯೆಯಿಂದಾಗಿ ಪೂರೈಕೆಯಲ್ಲಿ ವ್ಯತ್ಯಯವಾಗಿದ್ದು, ಮೂರ್ನಾಲ್ಕು ದಿನಗಳಿಗೂ ಸಾಕಾಗುವುದಿಲ್ಲ. ಬಳ್ಳಾರಿ, ರಾಯಚೂರು, ಯರಮರಸ್ ಸೇರಿ ನಾಡಿನ ಎಲ್ಲ ಉಷ್ಣ ವಿದ್ಯುತ್ ಸ್ಥಾವರಗಳಿಗೆ ಪ್ರತಿ ವರ್ಷ ಅಂದಾಜು 172 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲಿನ ಅಗತ್ಯವಿದೆ. ಆದರೆ ಕೇಂದ್ರದಿಂದ ಬರುವ ಕಲ್ಲಿದ್ದಲು ಪ್ರಮಾಣ ಕಡಿಮೆಯಾಗಿದೆ. ಆದ್ದರಿಂದ ರಾಜ್ಯ ಸರ್ಕಾರ 10 ಲಕ್ಷ ಮೆಟ್ರಿಕ್ ಟನ್ ಕಲ್ಲಿದ್ದಲು ಆಮದು ಮಾಡಿಕೊಳ್ಳಲು ಕ್ರಮ ಕೈಗೊಂಡಿದೆ. ಕೇಂದ್ರ ಇಂಡಿಯನ್ ಎಕ್ಸ್‌ಚೇಂಜ್ ಮೂಲಕ 300 ಮೆವಾ, ಅಲ್ಪಕಾಲಿಕ ಟೆಂಡರ್ ಮೂಲಕ 500 ಮೆವಾ ವಿದ್ಯುತ್ ಪಡೆದಿದ್ದರೂ ಸಮಸ್ಯೆ ನೀಗಿಲ್ಲ. ಸದ್ಯಕ್ಕೆ ಬಗೆಹರಿಯುವ ಲಕ್ಷಣಗಳೂ ಕಾಣುತ್ತಿಲ್ಲ.**

## ಅನಿಯಮಿತ ಲೋಡ್ ಶೆಡ್ಡಿಂಗ್

ವಿದ್ಯುತ್ ಬೇಡಿಕೆ ಹೆಚ್ಚಿದ್ದರಿಂದ ಅನಿಯಮಿತ ಲೋಡ್ ಶೆಡ್ಡಿಂಗ್ ಜಾರಿಯಾಗಿದೆ. ಪಟ್ಟಣ ಪ್ರದೇಶಗಳಲ್ಲಿ ಒಂದೊಂದು ಗಂಟೆ ವಿದ್ಯುತ್ ಕಡಿತವಾಗುತ್ತಿದ್ದರೆ, ಗ್ರಾಮೀಣ ಪ್ರದೇಶದಲ್ಲಿ ಮೂರ್ನಾಲ್ಕು ಗಂಟೆ ವಿದ್ಯುತ್ ಕಡಿತವಾಗುತ್ತಿದೆ. ಕೃಷಿ ಪಂಪ್‌ಸೆಟ್‌ಗಳಿಗೆ ದಿನದಲ್ಲಿ 7 ಗಂಟೆ ತ್ರೀಫೇಸ್ ವಿದ್ಯುತ್ ಸರಬರಾಜು ಮಾಡುವುದಾಗಿ ಘೋಷಿಸಿದ್ದರೂ ಈ ತನಕ ಐದಾರು ಗಂಟೆಯೂ ಸರಿಯಾಗಿ ವಿದ್ಯುತ್ ಲಭ್ಯವಾಗುತ್ತಿಲ್ಲ ಎನ್ನುವ ಗೋಳು ರೈತರದ್ದು. ಸಾಕಷ್ಟು ಪ್ರಮಾಣದಲ್ಲಿ ವಿದ್ಯುತ್ ಲಭ್ಯವಿದೆ ಎಂದು ಸಮಜಾಯಿಷಿ ನೀಡುತ್ತಿರುವ ಸರ್ಕಾರ, ಮತ್ತೊಂದೆಡೆ ಅನಿಯಮಿತ ಲೋಡ್ ಶೆಡ್ಡಿಂಗ್ ಸೂತ್ರಕ್ಕೆ ಮಾರು ಹೋಗಿರುವುದು ಅಚ್ಚರಿ.

**ಬೇಸಿಗೆಯಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗುವುದು ಸಹಜ. ಅಲ್ಪಾವಧಿ ಟೆಂಡರ್‌ನಲ್ಲಿ ವಿದ್ಯುತ್ ಖರೀದಿ ಮಾಡುವುದು, ಕಲ್ಲಿದ್ದಲು ಆಮದು ಸೇರಿದಂತೆ ಪರಿಸ್ಥಿತಿ ಎದುರಿಸಲು ಅಗತ್ಯವಿರುವ ಎಲ್ಲ ಕ್ರಮ ಕೈಗೊಳ್ಳಲಾಗಿದೆ.**

[illegible] ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ

### ಉತ್ಪಾದನೆ ಎಷ್ಟಿದೆ?

ಸರ್ಕಾರಿ ಸ್ವಾಮ್ಯದ ಕರ್ನಾಟಕ ವಿದ್ಯುತ್ ನಿಗಮದ ಆರ್‌ಟಿಪಿಎಸ್, ಬಿಟಿಪಿಎಸ್, ವೈಟಿಪಿಎಸ್, ಲಿಂಗನಮಕ್ಕಿ, ವಾರಾಹಿ, ಶರಾವತಿ, ಗೇರುಸೊಪ್ಪ ಸೇರಿದಂತೆ ಎಲ್ಲ ಯೋಜನೆಗಳಿಂದ ಸದ್ಯ ವಿದ್ಯುತ್ ಗ್ರಿಡ್‌ಗೆ 5366 ಮೆವಾ ವಿದ್ಯುತ್ ಲಭ್ಯವಾಗುತ್ತಿದೆ. ಹೆಚ್ಚೆಂದರೆ ಈ ಪ್ರಮಾಣ 5600 ಮೆವಾಗೆ ಹೋಗಬಹುದು. ಕೇಂದ್ರ ಸರ್ಕಾರದ ಪಾಲು 3 ಸಾವಿರ ಮೆವಾ ಲಭ್ಯವಾಗುತ್ತಿದೆ. ಹೀಗಾಗಿ ಹೆಚ್ಚಿನ ವಿದ್ಯುತ್‌ಗಾಗಿ ಖರೀದಿ ಅನಿವಾರ್ಯ ಆಗಿದೆ.



**ಬೇಸಿಗೆ** ನಿಭಾಯಿಸುವ ಸಲುವಾಗಿ 1000 ಮೆವಾ ವಿದ್ಯುತ್ ಖರೀದಿಗೆ ಅನುಮತಿ ನೀಡಬೇಕು ಎಂದು ಸರ್ಕಾರ ಕೆಇಆರ್‌ಸಿಗೆ ಪ್ರಸ್ತಾವ ಸಲ್ಲಿಸಿತ್ತು. ಅಲ್ಪಾವಧಿ ಗುತ್ತಿಗೆಯಲ್ಲಿ ವಿದ್ಯುತ್ ಖರೀದಿ ಮಾಡಲು ಕೆಇಆರ್‌ಸಿ ಅನುಮತಿ ನೀಡಿದ್ದು, ಅದರ ಅನ್ವಯ 900 ಮೆವಾ ವಿದ್ಯುತ್ ಖರೀದಿ ಮಾಡಲು ಇಂಧನ ಇಲಾಖೆ ಕ್ರಮ ಕೈಗೊಂಡಿದೆ. ಇನ್ನೂ 500 ಮೆವಾ ವಿದ್ಯುತ್ ಖರೀದಿಗೆ ಯತ್ನ ನಡೆಯುತ್ತಿದೆ.

### 3553 ದಶಲಕ್ಷ ಯುನಿಟ್

**ಬೇಸಿಗೆ** ನಿಭಾಯಿಸಲು ಲಿಂಗನಮಕ್ಕಿ, ಸೂಪಾ ಮತ್ತು ಮಾಣಿ ಜಲಾಶಯಗಳಲ್ಲಿ ಕನಿಷ್ಠ 4500 ದಶಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸಬಹುದಾದಷ್ಟು ನೀರು ಬೇಕಾಗುತ್ತದೆ. ಆದರೆ ಈಗ ಅಲ್ಲಿರುವ ನೀರಿನ ಸಂಗ್ರಹದಿಂದ 3553 ದಶಲಕ್ಷ ಯುನಿಟ್ ವಿದ್ಯುತ್ ಅಷ್ಟೇ ಉತ್ಪಾದಿಸಬಹುದು.

### ನೆರವಾಗದ ಲಿಂಗನಮಕ್ಕಿ

**ಬೇಸಿಗೆ** ಸಂದರ್ಭದಲ್ಲಿ ಸಂಕಷ್ಟ ಪರಿಸ್ಥಿತಿ ನಿಭಾಯಿಸಲು ಲಿಂಗನಮಕ್ಕಿ ಜಲಾಶಯ ನೆರವಿಗೆ ಬರುತ್ತಿತ್ತು. ಆದರೆ ಕೇಂದ್ರದಿಂದ ಕಲ್ಲಿದ್ದಲು ಸಮಸ್ಯೆ ಎದುರಾದಾಗಲೆಲ್ಲ ಈ ವಿದ್ಯುದಾಗಾರ ಅವಲಂಬಿಸಿದ ಪರಿಣಾಮ ಅಲ್ಲೂ ನೀರಿನ ಸಂಗ್ರಹ ಶೇ.35ಕ್ಕೆ ಕುಸಿದಿದೆ. ಮಳೆಗಾಲದಲ್ಲಿ ಶೇ.60ರಷ್ಟಿದ್ದ ಸಂಗ್ರಹ ಬೇಸಿಗೆ ತೀವ್ರವಾಗುವ ಮೊದಲೇ ಅರ್ಧದಷ್ಟು ಖಾಲಿಯಾಗಿದೆ.

---

# ಭಾರತೀಯ ರೈಲ್ವೆಯಿಂದ ಇತಿಹಾಸ ಸೃಷ್ಟಿ

■ ಹೊಸದಿಲ್ಲಿ, ಮಾ.5

Pg. No. 10 ಹೊಸದಿಗಂತ

ಭಾರತೀಯ ರೈಲ್ವೆ ನೂತನ ಇತಿಹಾಸ ಸೃಷ್ಟಿಸಿದೆ. ಡೀಸೆಲ್ ಎಂಜಿನ್ ಒಂದನ್ನು ಎಲೆಕ್ಟ್ರಿಕ್ ಎಂಜಿನ್ ಆಗಿ ಪರಿವರ್ತಿಸುವ ಮೂಲಕ ರೈಲ್ವೆ ಇತಿಹಾಸದಲ್ಲಿ ಮಹತ್ವದ ಮೈಲಿಗಲ್ಲು ಸಾಧಿಸಿದೆ.

ಉತ್ತರ ಪ್ರದೇಶದ ವಾರಣಾಸಿಯಲ್ಲಿರುವ ರೈಲ್ವೆ ಉತ್ಪಾದಕ ಘಟಕ ದಿ ಡೀಸೆಲ್ ಲೋಕೋಮೋಟೀವ್ ವರ್ಕ್ಸ್‌ನಲ್ಲಿ ರೈಲ್ವೆ ಈ ಸಾಧನೆ ಮಾಡಿದೆ. ಸ್ಥಳೀಯ ತಂತ್ರಜ್ಞಾನ ಉಪಯೋಗಿಸಿ ಡೀಸೆಲ್ ಎಂಜಿನ್ ಒಂದನ್ನು ವಿದ್ಯುತ್ ಚಾಲಿತ ಎಂಜಿನ್ ಆಗಿ ಪರಿವರ್ತನೆ ಗೊಳಿಸಲಾಗಿದೆ. ಈ ರೀತಿಯಲ್ಲಿ ಎಂಜಿನ್ ಬದಲಾವಣೆಯಾಗಿರುವುದು ಜಗತ್ತಿನಲ್ಲಿ ಇದೇ ಮೊದಲೆಂದು ರೈಲ್ವೆ ಘಟಕದ ಅಧಿಕಾರಿಗಳು ಹೇಳಿದ್ದಾರೆ.

ಮೇಕ್ ಇನ್ ಇಂಡಿಯಾ ಯೋಜನೆಯಡಿಯಲ್ಲಿ 2017ರ ಡಿಸೆಂಬರ್ 22 ಈ ಕಾರ್ಯ ಪ್ರಾರಂಭಗೊಂಡಿತ್ತು. 2018ರ ಫೆಬ್ರವರಿ 28ರಂದು ಎಂಜಿನ್ ಪರಿವರ್ತನೆ ಯಶಸ್ವಿಯಾಗಿ ಪೂರ್ಣಗೊಂಡಿದೆ. ಅತ್ಯಂತ ಕಡಿಮೆ ಅವಧಿಯಲ್ಲಿ ಇಂತಹಾ ಮಹತ್ವದ ಸಾಧನೆ ಮಾಡಲಾಗಿದೆ ಎಂದು ಡಿಎಲ್‌ಡಬ್ಲ್ಯೂನ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ನಿತಿನ್ ಮೆಹ್ರೋತ್ರಾ ಹೇಳಿದರು.

---

Vijayawani 06/03/18

# ಜನತೆಗೆ ಕರೆಂಟ್ ಶಾಕ್

## ರಾಜ್ಯಾದ್ಯಂತ ಅನಧಿಕೃತ ಲೋಡ್‌ಶೆಡ್ಡಿಂಗ್



» 2 ಗಂಟೆ ಕಡಿತ

ಬೆಂಗಳೂರು: ಬೇಸಿಗೆ ಆರಂಭದಲ್ಲೇ ಅರ್ಧ ಕರ್ನಾಟಕ ಕತ್ತಲಲ್ಲಿ ಮುಳುಗಿದೆ. ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಹೆಚ್ಚಾಗಿರುವ ಪರಿಣಾಮ ಪರಿಸ್ಥಿತಿ ನಿಭಾಯಿಸುವುದಕ್ಕಾಗಿ ಮಾರ್ಚ್ ಮೊದಲ ವಾರದಲ್ಲೇ ತಾಂತ್ರಿಕ ಕಾರಣ ಮುಂದಿಟ್ಟುಕೊಂಡು ಅನಧಿಕೃತ ಲೋಡ್‌ಶೆಡ್ಡಿಂಗ್ ಜಾರಿಗೊಳಿಸಲಾಗಿದೆ. ರಾಜಧಾನಿ ಬೆಂಗಳೂರು ಸೇರಿದಂತೆ ಹಲವೆಡೆ ದಿನನಿತ್ಯ 1-2 ಗಂಟೆ ವಿದ್ಯುತ್ ಕಡಿತಗೊಳಿಸಲಾಗುತ್ತಿದೆ. ● ವಿವರ ಪುಟ 7

### ಸಮಸ್ಯೆಗೆ ಕಾರಣಗಳೇನು?

■ 2 ಸಾವಿರ ಮೆಗಾವಾಟ್ ವಿದ್ಯುತ್ ಕೊರತೆ ■ ಹೆಚ್ಚುವರಿ ಉತ್ಪಾದನೆಗೆ ಕಲ್ಲಿದ್ದಲು ಸಮಸ್ಯೆ ■ ಲಿಂಗನಮಕ್ಕಿಯಲ್ಲಿ ಕುಸಿದ ನೀರಿನ ಸಂಗ್ರಹ

Vijayavani 06/03/18

# ಹೊತ್ತಿ ಉರಿದ ಕೆಮಿಕಲ್ಸ್ ಗೋದಾಮು

## ಟ್ಯಾನರಿ ರಸ್ತೆಯ 3 ಅಂತಸ್ತಿನ ಕಟ್ಟಡದಲ್ಲಿ ಅವಘಡ | 15 ಅಗ್ನಿಶಾಮಕ ವಾಹನಗಳ ಕಾರ್ಯಾಚರಣೆ

■ **ವಿಜಯವಾಣಿ ಸುದ್ದಿಜಾಲ** ಬೆಂಗಳೂರು

ಟ್ಯಾನರಿ ರಸ್ತೆಯಲ್ಲಿರುವ ಕೆಮಿಕಲ್ ಗೋದಾಮಿಗೆ ಬೆಂಕಿ ಬಿದ್ದು ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಸುಟ್ಟು ಹೋಗಿವೆ. 3 ಅಂತಸ್ತಿನ ಕಟ್ಟಡ ಹೊತ್ತಿ ಉರಿದ ಪರಿಣಾಮ ಸುತ್ತಮುತ್ತಲ ಮನೆಗಳ ನಿವಾಸಿಗಳಲ್ಲೂ ಆತಂಕ ಸೃಷ್ಟಿಯಾಗಿತ್ತು.

ಸೋಮವಾರ ರಾತ್ರಿ 8 ಗಂಟೆಗೆ ಬೆಂಕಿ ಕಿಡಿ ಕಾಣಿಸಿಕೊಂಡಿದೆ. ಹೊಗೆ ಗಮನಿಸಿದ ಸ್ಥಳೀಯರು ಗೋದಾಮು ಅಕ್ಕಪಕ್ಕದ ಮನೆಗಳಲ್ಲಿ ನೆಲೆಸಿದ್ದ ನಿವಾಸಿಗಳನ್ನು ಹೊರಗೆ ಕರೆತಂದರು. ಅಲ್ಲದೆ, ಮನೆಯಲ್ಲಿನ ಅಡುಗೆ ಅನಿಲ ಸಿಲಿಂಡರ್‌ಗಳನ್ನು ಹೊರ ತೆಗೆದು ಮುಂಜಾಗ್ರತೆ ವಹಿಸಿದರು. ಸುತ್ತಮುತ್ತಲ 1 ಕಿ.ಮೀ.ವರೆಗೆ ದಟ್ಟ ಹೊಗೆ ಆವರಿಸಿತ್ತು.

ವಿಷಯ ತಿಳಿದ ಅಗ್ನಿ ಶಾಮಕ ಸಿಬ್ಬಂದಿ 15ಕ್ಕೂ ಅಧಿಕ ವಾಹನಗಳೊಂದಿಗೆ ಸ್ಥಳಕ್ಕೆ ಧಾವಿಸಿ ಬೆಂಕಿ ನಂದಿಸುವ ಕಾರ್ಯಾಚರಣೆಯಲ್ಲಿ ತೊಡಗಿದರು. ಕೆಮಿಕಲ್ ವಸ್ತುಗಳಿದ್ದ ಕಾರಣ ಅಗ್ನಿ ಕೆನ್ನಾಲಿಗೆ ಇಡೀ ಕಟ್ಟಡಕ್ಕೆ ವ್ಯಾಪಿಸಿದೆ. ದಟ್ಟ ಹೊಗೆ ಆವರಿಸಿದ್ದರಿಂದ ಬೆಂಕಿ ನಂದಿಸಲು ಅಗ್ನಿಶಾಮಕ ಸಿಬ್ಬಂದಿ ಹರಸಾಹಸ ಪಡಬೇಕಾಯಿತು.

ಹಂತ ಹಂತವಾಗಿ ಬೆಂಕಿಯನ್ನು ಹತೋಟಿಗೆ ತಂದ ಅಗ್ನಿಶಾಮಕ ಸಿಬ್ಬಂದಿ ಇಡೀ ರಾತ್ರಿ ಕಾರ್ಯಾಚರಣೆ ನಡೆಸಿದರು. ರಸ್ತೆ ಮಾರ್ಗವನ್ನು ಬ್ಲಾಕ್ ಮಾಡಿದ ಪೊಲೀಸರು ಸುಗಮ ಸಂಚಾರಕ್ಕೆ ಪರ್ಯಾಯ ಮಾರ್ಗ ಕಲ್ಪಿಸಿದರು.

ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಶಂಕೆ ವ್ಯಕ್ತವಾಗಿದೆ. ಸ್ಥಳಕ್ಕೆ ಬಿಬಿಎಂಪಿ ಮೇಯರ್ ಸಂಪತ್‌ಕುಮಾರ್ ಮತ್ತು ಅಗ್ನಿ ಶಾಮಕ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ಕೊಟ್ಟು ಪರಿಶೀಲನೆ ನಡೆಸಿದರು. ದೇವರಜೀವನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.



ಟ್ಯಾನರಿ ರಸ್ತೆಯಲ್ಲಿ ಸೋಮವಾರ ರಾತ್ರಿ ಹೊತ್ತಿ ಉರಿದ ಕೆಮಿಕಲ್ ಗೋದಾಮು.

ಪ್ರಜಾವಾಣಿ ಪು-2 06-03-2018



ಬೆಂಕಿ ನಂದಿಸುತ್ತಿರುವ ಅಗ್ನಿಶಾಮಕ ಸಿಬ್ಬಂದಿ –ಪ್ರಜಾವಾಣಿ ಚಿತ್ರ

# ದೇವರಜೀವನಹಳ್ಳಿ: ಬಣ್ಣದ ರಾಸಾಯನಿಕ ಕಾರ್ಖಾನೆಗೆ ಬೆಂಕಿ

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ದೇವರಜೀವನಹಳ್ಳಿಯ ಸಕ್ಕರೆ ಮಂಡಿ ಬಳಿ ಸೋಮವಾರ ರಾತ್ರಿ ಬಣ್ಣದ ರಾಸಾಯನಿಕ ಕಾರ್ಖಾನೆಗೆ ಬೆಂಕಿ ಹೊತ್ತಿಕೊಂಡು ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಸುಟ್ಟು ಭಸ್ಮವಾಗಿವೆ.

ಮೂರು ಅಂತಸ್ತಿನ ಕಟ್ಟಡದಲ್ಲಿ ಬಣ್ಣದ ಸಾಮಗ್ರಿಗಳನ್ನು ಸಂಗ್ರಹಿಸಿಡಲಾಗಿತ್ತು. ಆಕಸ್ಮಿಕವಾಗಿ ಅವುಗಳಿಗೆ ಬೆಂಕಿ ಹೊತ್ತಿಕೊಂಡಿದೆ. ಕ್ಷಣಾರ್ಧದಲ್ಲೇ ಬೆಂಕಿಯ ಕೆನ್ನಾಲಿಗೆಯು ಇಡೀ ಕಟ್ಟಡವನ್ನೇ ಆವರಿಸಿದೆ. ಕಟ್ಟಡದಲ್ಲಿದ್ದ ವಸ್ತುಗಳು ಸುಟ್ಟು ಕರಕಲಾಗಿವೆ ಎಂದು ಅಗ್ನಿಶಾಮಕ ಸಿಬ್ಬಂದಿ ತಿಳಿಸಿದರು.

'ಮುನ್ನೆಚ್ಚರಿಕಾ ಕ್ರಮವಾಗಿ ಅಕ್ಕಪಕ್ಕದ ನಿವಾಸಿಗಳನ್ನು ಸ್ಥಳಾಂತರ ಮಾಡಲಾಗಿತ್ತು. ಸಂಜೆ 6 ಗಂಟೆ ಸುಮಾರಿಗೆ ಹೊತ್ತಿಕೊಂಡ ಬೆಂಕಿ ರಾತ್ರಿ 11.30ರ ವೇಳೆಗೆ ನಿಯಂತ್ರಣಕ್ಕೆ ಬಂದಿದೆ. 15 ಅಗ್ನಿಶಾಮಕ ವಾಹನಗಳಲ್ಲಿ ಬಂದು ಕಾರ್ಯಾಚರಣೆ ನಡೆಸಿದ್ದೇವೆ' ಎಂದು ಹೇಳಿದರು.

'ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಹೊತ್ತಿಕೊಂಡಿರುವ ಸಾಧ್ಯತೆ ಇದೆ. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡಿದ್ದೇವೆ' ಎಂದು ದೇವರಜೀವನಹಳ್ಳಿ ಪೊಲೀಸರು ತಿಳಿಸಿದರು.

ಈ ಕಟ್ಟಡದಲ್ಲಿ ಪೀಠೋಪಕರಣಗಳನ್ನೂ ತಯಾರಿಸಲಾಗುತ್ತಿತ್ತು. ಸಾಕಷ್ಟು ಮಂದಿ ಕೆಲಸ ಮಾಡುತ್ತಿದ್ದರು. ಬೆಂಕಿ ಹೊತ್ತಿಕೊಂಡ ಕೂಡಲೇ ಅವರೆಲ್ಲರೂ ಹೊರಗೆ ಓಡಿ ಬಂದಿದ್ದಾರೆ. ಅಗ್ನಿ ಸುರಕ್ಷತಾ ಕ್ರಮಗಳನ್ನು ಕಟ್ಟಡದ ಮಾಲೀಕರು ಕೈಗೊಂಡಿರಲಿಲ್ಲ ಎಂದು ಸ್ಥಳೀಯ ನಿವಾಸಿ ಮಾಹಿತಿ ನೀಡಿದರು.

ಪು-2, 06-03-18

# ಕೆಮಿಕಲ್ ಫ್ಯಾಕ್ಟರಿಗೆ ಬೆಂಕಿ; ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳು ಭಸ್ಮ

**ಬೆಂಗಳೂರು:** ಶಾರ್ಟ್ ಸರ್ಕಿಟ್‌ನಿಂದ ಕೆಮಿಕಲ್ ಫ್ಯಾಕ್ಟರಿಗೆ ಬೆಂಕಿ ತಗುಲಿ ಲಕ್ಷಾಂತರ ರೂ. ಮೌಲ್ಯದ ವಸ್ತುಗಳು ಬೆಂಕಿಗಾಹುತಿಯಾದ ಘಟನೆ ಡಿ.ಜೆ.ಹಳ್ಳಿಯ ಟ್ಯಾನರಿ ರಸ್ತೆಯಲ್ಲಿ ಸೋಮವಾರ ರಾತ್ರಿ ನಡೆದಿದೆ. ಅದೃಷ್ಟವಶಾತ್ ಯಾರಿಗೂ ತೊಂದರೆಯಾಗಿಲ್ಲ. ಟ್ಯಾನರಿ ರಸ್ತೆಯಲ್ಲಿರುವ ಮೂರು ಹಂತಸ್ತಿನ ಕಟ್ಟಡದಲ್ಲಿರುವ ಪ್ಲೈವುಡ್ ಶೈನಿಂಗ್‌ಗೆ ಬಳಸುವ ದ್ರವ ತಯಾರಿಕಾ ಘಟಕದಲ್ಲಿ ರಾತ್ರಿ 8 ಗಂಟೆ ಸುಮಾರಿಗೆ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡಿದೆ. ಬೆಂಕಿಯು ಇಡೀ ಕಟ್ಟಡ ಆವರಿಸಿದ್ದು, ಬೆಂಕಿಯ ಜ್ವಾಲೆ ಹೊರಗಡೆ ಹೆಚ್ಚಾಗುತ್ತಿದ್ದಂತೆ ಗಮನಿಸಿದ ಸ್ಥಳೀಯರು ಅಗ್ನಿಶಾಮಕ ಮತ್ತು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಕೂಡಲೇ 15 ವಾಹನಗಳು ಸಮೇತ ಸ್ಥಳಕ್ಕೆ ಧಾವಿಸಿ ಅಗ್ನಿಶಾಮಕ ಸಿಬ್ಬಂದಿ ಬೆಂಕಿ ನಂದಿಸುವಲ್ಲಿ ಯಶಸ್ವಿಯಾಗಿದ್ದಾರೆ. ಕೆಮಿಕಲ್ ಫ್ಯಾಕ್ಟರಿ ಮಾಲೀಕರ ಯಾರು ಎಂಬುದು ಪತ್ತೆಯಾಗಿಲ್ಲ. ಬೆಂಕಿಗೆ ಲಕ್ಷಾಂತರ ರೂ. ಮೌಲ್ಯದ ಕೆಮಿಕಲ್ ನಾಶವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಅದೃಷ್ಟವಶಾತ್ ಬೆಂಕಿ ಹೊತ್ತಿಕೊಂಡ ವೇಳೆ ಫ್ಯಾಕ್ಟರಿಯಲ್ಲಿ ಯಾರು ಇರಲಿಲ್ಲ. 7.309ರ ಸುಮಾರಿಗೆ ಫ್ಯಾಕ್ಟರಿಗೆ ಬಾಗಿಲು ಹಾಕಿ ಕಾರ್ಮಿಕರು, ಮಾಲೀಕರು ಮನೆಗೆ ತೆರಳಿದ್ದಾರೆ ಎಂದು ಅಧಿಕಾರಿ ವಿವರಿಸಿದರು.

Pg-14 06-03-18 ಉದಯವಾಣಿ

# ಹಂಚಿಕೆಗಿಂತಲೂ ವಿದ್ಯುತ್ ಬಳಕೆ ಪ್ರಮಾಣ ಕಡಿಮೆ

**ಬೆಂಗಳೂರು:** ಬಿಸಿಲಿನ ತಾಪ ಏರುತ್ತಿದ್ದಂತೆ ವಿದ್ಯುತ್ ಬೇಡಿಕೆ ಏರುಮುಖವಾಗಿದ್ದರೂ ರಾಜ್ಯಾದ್ಯಂತ ಎಸ್ಕಾಂಗಳಿಗೆ ಹಂಚಿಕೆಯಾದ ವಿದ್ಯುತ್‌ಗಿಂತಲೂ ಬಳಕೆ ಕಡಿಮೆ ಇದೆ.

ರಾಜ್ಯದಲ್ಲಿ ನಿತ್ಯ ಸರಾಸರಿ 10,100 ಮೆಗಾವ್ಯಾಟ್‌ನಿಂದ 10,200 ಮೆಗಾವ್ಯಾಟ್‌ನಷ್ಟು ವಿದ್ಯುತ್ ಬೇಡಿಕೆಯಿದ್ದು, ಇಷ್ಟೂ ಪ್ರಮಾಣದ ವಿದ್ಯುತ್ ಪೂರೈಕೆಯಾಗುತ್ತಿದೆ. ಸೌರವಿದ್ಯುತ್ ಉತ್ಪಾದನೆ ಹೆಚ್ಚಳದಿಂದ ಸದ್ಯ ಬೇಡಿಕೆಗಿಂತ ತುಸು ಹೆಚ್ಚು ವಿದ್ಯುತ್ ಪೂರೈಕೆಯಾಗುತ್ತಿದೆ.

ಚಳಿಗಾಲ ಕಳೆದು ಬೇಸಿಗೆ ಆರಂಭವಾಗುತ್ತಿದ್ದಂತೆ ಏರುತ್ತಾ ಹೋಗುವ ಬೇಡಿಕೆಗೆ ತಕ್ಕಂತೆ ಉತ್ಪಾದನೆ, ಪೂರೈಕೆ ಸವಾಲೆನಿಸುತ್ತದೆ. ಬೇಸಿಗೆಯಲ್ಲಿ ಕೃಷಿ ಚಟುವಟಿಕೆಗೆ ಕೊಳವೆಬಾವಿಗಳನ್ನು ಹೆಚ್ಚಾಗಿ ಆಶ್ರಯಿಸುವುದರಿಂದ ಬೇಡಿಕೆ ತೀವ್ರವಾಗಿರುತ್ತದೆ. ಇಷ್ಟಾದರೂ ಸದ್ಯ ಬೇಡಿಕೆಯಷ್ಟು ವಿದ್ಯುತ್ ಪೂರೈಕೆಯಾಗುತ್ತಿದೆ.

**ಹಂಚಿಕೆಗಿಂತ ಬಳಕೆ ಕಡಿಮೆ:** ಕಳೆದ 15 ದಿನಗಳಲ್ಲಿ ವಿದ್ಯುತ್ ಹಂಚಿಕೆ ಪ್ರಮಾಣವು 233 ದಶಲಕ್ಷ ಯೂನಿಟ್‌ನಿಂದ ಗರಿಷ್ಠ 241 ದಶಲಕ್ಷ ಯೂನಿಟ್‌ವರೆಗೆ ಏರಿಕೆಯಾಗಿದೆ. ಆದರೆ ಬಳಕೆ ಪ್ರಮಾಣವು 212 ದಶಲಕ್ಷ ಯೂನಿಟ್‌



ನಿಂದ 226 ದಶಲಕ್ಷ ಯೂನಿಟ್ ಮಿತಿಯೊಳಗಿದೆ. ಫೆ. 15ರಿಂದ ಈವರೆಗೆ ಹಂಚಿಕೆ ಪ್ರಮಾಣಕ್ಕಿಂತ ನಿತ್ಯ ಸರಾಸರಿ 10ರಿಂದ 15 ದಶಲಕ್ಷ ಯೂನಿಟ್‌ನಷ್ಟು ವಿದ್ಯುತ್ ಬಳಕೆ ಕಡಿಮೆಯಿರುವುದು ಕಂಡುಬಂದಿದೆ. ಭಾನುವಾರದಂದು ಸಾಮಾನ್ಯ ದಿನಕ್ಕಿಂತ 500ರಿಂದ 700 ಮೆವ್ಯಾನಷ್ಟು ವಿದ್ಯುತ್ ಬಳಕೆ ಕಡಿಮೆ ಇರಲಿದೆ.

ರಾಜ್ಯದ ಹಲವೆಡೆ ಬೆಳೆ ಕಟಾವು ನಡೆದಿರುವುದರಿಂದ ಕೃಷಿ ಪಂಪ್‌ಸೆಟ್ ಬಳಕೆ ಕಡಿಮೆಯಾಗಿದ್ದು, ಕೃಷಿ ಕ್ಷೇತ್ರದ ವಿದ್ಯುತ್ ಬಳಕೆಯಲ್ಲಿ ತುಸು ಇಳಿಕೆಯಾಗಿದೆ. ಆದರೆ ಬಿಸಿಲಿನ ತಾಪ ಹೆಚ್ಚಾಗುತ್ತಿದ್ದು, ಫ್ಯಾನ್, ಹವಾನಿಯಂತ್ರಿತ ಸಾಧನಗಳ ಬಳಕೆ ತೀವ್ರವಾಗಿದ್ದು, ನಗರ ಪ್ರದೇಶಗಳಲ್ಲಿ ವಿದ್ಯುತ್ ಬಳಕೆ ಹೆಚ್ಚಾಗಿದೆ.

**ಲೋಡ್ ಶೆಡ್ಡಿಂಗ್ ಇಲ್ಲ:** ರಾಜ್ಯಾದ್ಯಂತ ನಿತ್ಯ ಸರಾಸರಿ 10,100 ಮೆ.ವ್ಯಾ.ನಿಂದ 10,200 ಮೆ.ವ್ಯಾ.ನಷ್ಟು ವಿದ್ಯುತ್ ಬೇಡಿಕೆಯಿದ್ದು, ಅಷ್ಟೇ ಪ್ರಮಾಣದಲ್ಲಿ ಪೂರೈಕೆಯಾಗುತ್ತಿದೆ. ಸದ್ಯದ ಪರಿಸ್ಥಿತಿಯಲ್ಲಿ ಹಂಚಿಕೆಗಿಂತಲೂ ಬಳಕೆ ಪ್ರಮಾಣ ಕಡಿಮೆ ಇದೆ. ಸೌರವಿದ್ಯುತ್ ಉತ್ಪಾದನೆಯೂ ಹೆಚ್ಚಾಗಿದೆ. ಬೇಡಿಕೆಯಷ್ಟು ವಿದ್ಯುತ್ ಪೂರೈಕೆಯಾಗುತ್ತಿದ್ದು, ರಾಜ್ಯದ ಯಾವುದೇ ಭಾಗದಲ್ಲಿ ಲೋಡ್ ಶೆಡ್ಡಿಂಗ್ ಇಲ್ಲ ಎಂದು ಕೆಪಿಟಿಸಿಎಲ್ ನಿರ್ದೇಶಕ (ತಾಂತ್ರಿಕ) ನಾಗೇಶ್ 'ಉದಯವಾಣಿ'ಗೆ ತಿಳಿಸಿದರು.

ಕನ್ನಡ ಪ್ರಭ, Pg: 02, 06/03/18

# ಶಾರ್ಟ್ ಸರ್ಕ್ಯೂಟ್: ಕೆಮಿಕಲ್ ಫ್ಯಾಕ್ಟರಿಗೆ ಬೆಂಕಿ

**ಬೆಂಗಳೂರು:** ಟ್ಯಾನರಿ ರಸ್ತೆಯಲ್ಲಿ ರಾಸಾಯನಿಕ ತಯಾರಿಕಾ ಕಂಪನಿಯೊಂದರಲ್ಲಿ ಸೋಮವಾರ ರಾತ್ರಿ ಆಕಸ್ಮಿಕವಾಗಿ ಅಗ್ನಿ ಅವಘಡ ಸಂಭವಿಸಿದ ಅಪಾರ ಪ್ರಮಾಣ ಆಸ್ತಿ-ಪಾಸ್ತಿ ನಷ್ಟವಾಗಿದೆ. ಪ್ರಾಣಹಾನಿ ಸಂಭವಿಸಿಲ್ಲ. ಕಂಪನಿಯಲ್ಲಿ ರಾತ್ರಿ 7ಕ್ಕೆ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಹತ್ತಿಕೊಂಡಿದೆ. ಬಳಿಕ 3 ಅಂತಸ್ತಿನ ಕಟ್ಟಡದ ವ್ಯಾಪ್ತಿಗೆ ಅಗ್ನಿ ಜ್ವಾಲೆ ವ್ಯಾಪ್ತಿಸಿದೆ. ಅಗ್ನಿಶಾಮಕ ದಳ ಸಿಬ್ಬಂದಿ, ತಡ ರಾತ್ರಿವರೆಗೆ ಬೆಂಕಿ ನಂದಿಸುವ ಕಾರ್ಯಾಚರಣೆ ಮುಂದುವರಿಸಿದ್ದರು. ಘಟನೆ ಸಂಭವಿಸಿದ ವೇಳೆಗೆ ಕೆಲಸ ಮುಗಿಸಿ ಬಹುತೇಕ ಕಾರ್ಮಿಕರು ಹೊರ ಬಂದಿದ್ದರು. ಇನ್ನುಳಿದ ಕೆಲವರು ಬೆಂಕಿ ಕಾಣಿಸಿಕೊಂಡ ಕೂಡಲೇ ಪಾರಾಗಿದ್ದಾರೆ.

## 40 ಎಲೆಕ್ಟ್ರಿಕ್ ಬಸ್

ದೇಶದಲ್ಲೇ ಮೊದಲ ಬಾರಿಗೆ ಬೆಂಗಳೂರಿನಲ್ಲಿ 40 ಎಲೆಕ್ಟ್ರಿಕ್ ಬಸ್‌ಗಳ ಓಡಾಟಕ್ಕೆ ವ್ಯವಸ್ಥೆ ಮಾಡಿದ್ದು, ಶೀಘ್ರದಲ್ಲೇ ಚಾಲನೆ ನೀಡಲಾಗುವುದು ಎಂದು ಸಚಿವ ರೇವಣ್ಣ ತಿಳಿಸಿದರು. ಮಂಗಳೂರು ಮತ್ತು ಪುತ್ತೂರು ವಿಭಾಗಗಳಿಗೆ 833 ಹುದ್ದೆಗಳಿಗೆ ಅರ್ಜಿ ಆಹ್ವಾನಿಸಿದ್ದು, ಈಗಾಗಲೇ 9,377 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದಾರೆ. ಮಾರ್ಚ್ 12ರಿಂದ ಹಾಸನದ ಪ್ರಾದೇಶಿಕ ತರಬೇತಿ ಕೇಂದ್ರದಲ್ಲಿ ಈ ಅಭ್ಯರ್ಥಿಗಳಿಗೆ ಚಾಲನಾ ಪರೀಕ್ಷೆ ನಡೆಸಲಾಗುವುದು.ಎಂದರು.